ಹುಬ್ಬಳ್ಳಿ ವಿದ್ಯುತ್ ಸರಬರಾಜುಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ.)
ಅಧೀಕ್ಷಕ ಇಂಜಿನೀಯರ(ವಿ)
ಕಾರ್ಯ & ಪಾಲನೆ ವೃತ್ತ ಕಛೇರಿ, ನೆಹರುನಗರ,
ಬೆಳಗಾವಿ - 590 010.

HUBLI ELECTRICITY SUPPLY COMPANY LTD
( Govt. of Karnataka undertaking)
Superintending Engineer (Ele)
O & M Circle Office,
Neharu nagar, Belagavi-590 010

Phone:0831-247249 E-mail ID:seebgm.heccom@gmail.com
Corporate Identity Number(CIN): U31401KA2002SGC030437

# ಗ್ರಾಹಕರ ಕುಂದುಕೊರತೆಗಳ ನಿವಾರಣೆ ವೇದಿಕೆ

## ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ, ಬೆಳಗಾವಿ ಜಿಲ್ಲೆ

**ಪ್ರಕರಣ ಸಂಖ್ಯೆ:19/2019**

**ವೇದಿಕೆಯ ಸದಸ್ಯರು:**

ಶ್ರೀ **ಗಿರಿಧರ ಕುಲಕರ್ಣಿ**, ಅಧೀಕ್ಷಕ ಇಂಜಿನೀಯರ(ವಿ), ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಅಧ್ಯಕ್ಷರು.

ಶ್ರೀ **ಶರಿಪುದ್ದಿನ ಅಹ್ಮದ**, ಉಪಲೆಕ್ಕ ನಿಯಂತ್ರಣಾಧಿಕಾರಿ ಕಾರ್ಯ ಮತ್ತು ಪಾಲನೆ ವೃತ್ತ, ಹುವಿಸಕಂನಿ, ಬೆಳಗಾವಿ ಹಾಗೂ ವೇದಿಕೆಯ ಸದಸ್ಯರು.

ಶ್ರೀ **ಸುನೀಲ ಸಾಣಿಕೊಪ್ಪ**, ವಕೀಲರು, ಆಯೋಗದಿಂದ ನಿಯೋಜಿಸಲಾದ ಸದಸ್ಯರು.

**ಶ್ರೀ ಯು ಎಮ್ ಮೋಹಿತೆ**
(R.R.NO: Nil)
ಹೊಸ ಶಿವಾಜಿ ಕಾಲೋನಿ,
ತಿಳಕವಾಡಿ, ಜಿ:ಬೆಳಗಾವಿ. .............**ದೂರುದಾರರು.**

**ವಿರುದ್ಧ,**

**ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ)**
ಕಾರ್ಯ ಮತ್ತು ಪಾಲನೆ ಗ್ರಾಮೀಣ ಉಪ ವಿಭಾಗ-1,
ಹುವಿಸಕಂನಿ, ಬೆಳಗಾವಿ. .................**ಪ್ರತಿವಾದಿಗಳು.**

**ಪೀಠಿಕೆ:**

**1.** ದೂರುದರರು, ಈ ವೇದಿಕೆಗೆ ದಿನಾಂಕ:14.10.2019 ರಂದು ಈ ಕೆಳಗೆ ವಿವರಿಸಿದಂತೆ ದೂರನ್ನು ನೀಡಿರುತ್ತಾರೆ; Complaint/Grievance. Though complaint/objection letter given not issue electric connection, but issued following connection;

a) I P Set NO. NAV IP 67 standing in the name of A L Karlekar of Navge village RTC NO:55, against Court stay order.

b) R R NO. STB AEH 48495 Dt.27.07.2011, standing in the name of B M Nandi RTC NO 242/2, land purchased on Rs.100/- bond paper illegally, but availed connection in RTC NO 242/5.

c) I P Set NO. STB/ARIP 64650 2HP standing in the name of Maruti D Darveshi RTC NO 89/1, but IP Set coming in RTC NO:89/2 Santibastead village.

ಆದ್ದರಿಂದ, ಸದರಿ ದೂರುದಾರರು ಈ ವಿಷಯವನ್ನು ಇತ್ಯರ್ಥಪಡಿಸುವಂತೆ ಕೋರಿ ಈ ವೇದಿಕೆಗೆ ದಾವೆ ದಾಖಲಿಸಿರುತ್ತಾರೆ.

**2.** ಸದರಿ ದೂರು ಕುರಿತು, ಈ ಕಛೇರಿಯ ಸಭೆಯ ಸೂಚನೆ ಪತ್ರ ಸಂಖ್ಯೆ: ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2019-20/ಸಿ ವಾಯ್ ಎಸ್-201 ದಿ:25.10.2019 ರನ್ವಯ, ದಿನಾಂಕ:04.11.2019ರ ಅಪರಾಹ್ನ 04:30 ಕ್ಕೆ ವಿಚಾರಣೆಯನ್ನು ಈ ಕಛೇರಿಯಲ್ಲಿ ನಡೆಸಲಾಯಿತು. ಸದರಿ ಸಭೆಗೆ ದೂರುದಾರರು ಮತ್ತು ಪ್ರತಿವಾದಿಗಳು

ಹಾಜರಿರುತ್ತಾರೆ. ಸಭೆಯಲ್ಲಿ, ದೂರುದಾರರಿಗೆ ಮತ್ತು ಪ್ರತಿವಾದಿಗಳಿಗೆ ಲಿಖಿತ ರೂಪದಲ್ಲಿ ತಮ್ಮ ವಾದವನ್ನು ಮಂಡಿಸಲು ಸೂಚಿಸಲಾಯಿತು.

**3.** ಅದರಂತೆ, ದೂರುದಾರರು ದಿನಾಂಕ:27.11.2019 ರಂದು ಹಾಗೂ ಪ್ರತಿವಾದಿಗಳು 22.11.2019 ರಂದು ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

**ಅ.ದೂರುದಾರರು ಸಲ್ಲಿಸಿರುವ ಲಿಖಿತ ಹೇಳಿಕೆ ವಿವರ;**

a) I P Set NO. NAV IP 67 physically comes under Santibaswad RTC NO 242/5 but shown as navege village RTC NO 55 overlooking Court stay order still running in the name of A L Karlekar.
b) AEH connection STB AEH 48495 Dt.27.07.2011, running in the name of B M Nandi. He illegally purchased land on Rs.100/- bond paper mentioning RTC NO 242/2, but physically comes under RTC NO 242/5, surpassing Court stay order still running.
c) I P Set NO. STB/ARIP 64650 2HP standing in the name of Maruti D Darveshi RTC NO 89/1, but IP Set coming in RTC NO:89/2 Santibastead village. As per survey of A.D.L.R. Belgavi.
Santibastwad

**ಬ.ಪ್ರತಿವಾದಿ ಸಲ್ಲಿಸಿರುವ ಲಿಖಿತ ಹೇಳಿಕೆ ವಿವರ;**

ದಿನಾಂಕ : 04.11.2019 ರಂದು ಮದ್ಯಾಹ್ನ/ಅಪರಾಹ್ನ 04:30 ಕ್ಕೆ ಸದರಿ ಅರ್ಜಿ ವಿಚಾರಣೆಗಾಗಿ ಸಭೆ ನಡಿಸಿದ್ದು ಅದರಲ್ಲಿ NAVIP-67, STBAEH-48495 ಮತ್ತು STBARIP-64650 ರ ಬಗ್ಗೆ ಅರ್ಜಿದಾರರು ಹಾಗೂ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು ಚರ್ಚೆ ನಡೆಸಿದ್ದು ಸದರಿ ಸಭೆಯಲ್ಲಿ ಮೇಲಿನ ಎಲ್ಲಾ ಸ್ಥಾವರಗಳ ವಿವರವಾದ ಮಾಹಿತಿಯನ್ನು, ನೀಡಲು ನಿರ್ದೇಶನದನ್ವಯ, ಈ ಕೆಳಗಿನಂತೆ ವಿವರಣೆಗಳನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ.

a. NAVIP-67 ಸದರಿ ಕಛೇರಿಯಲ್ಲಿರುವ ಗಣಕಯಂತ್ರದಲ್ಲಿ ಈ ಸ್ಥಾವರದ ಬಗ್ಗೆ ಮಾಹಿತಿಯನ್ನು ಪರಿಶೀಲಿಸಿದಾಗ ಈ ಸಂಖ್ಯೆಯು ಯಾವುದೇ ಆರ್.ಆರ್ ಸಂಖ್ಯೆಕಂಡು ಬಂದಿರುವುದಿಲ್ಲ. ಆದರೆ ಅರ್ಜಿದಾರರು ತಿಳಿಸಿದ ಶ್ರೀ ಅರ್ಜುನ್ ಎಲ್.ಕರ್ಲೇಕರ್, ಇವರ ಹೆಸರಿನಲ್ಲಿ ಆರ್.ಆರ್.ಸಂಖ್ಯೆ NAVIP-22 ರ ಅಡಿಯಲ್ಲಿ ರಿ.ಸ. ನಂ 55/2 ಕ್ಕೆ 5 ಹೆಚ್.ಪಿ ವಿದ್ಯುತ್ ಮಂಜೂರಾಗಿದ್ದು ಅದು ದಿನಾಂಕ: 07.07.1987 ರಿಂದ ಪ್ರಾರಂಭಗೊಂಡಿರುತ್ತದೆ.

b. STBAEH-48495 ಸದರಿ ಸ್ಥಾವರದ ಮಾಹಿತಿಯನ್ನು ಗಣಕಯಂತ್ರದಲ್ಲಿ ಪರಿಶೀಲಿಸಿದಾಗ ಸದರಿ ಆರ್ ಆರ್ ಸಂಖ್ಯೆ STBAEH-48495 ಶ್ರೀ ಡಿ ಎಂ ನಂದಿ ಇವರ ಹೆಸರಿನಲ್ಲಿ ಅರ್ಜಿದಾರರು ಇರುವುದಾಗಿ ತಿಳಿಸಿದ್ದು, ಅದನ್ನು ಪರಿಶೀಸಲಾಗಿ 48495 ಇದು HNGAEH-48495 ಅಡಿಯಲ್ಲಿ ಹೊನಗಾ ಗ್ರಾಮ ಶ್ರೀಮತಿ ಲೀಲಾ ಲಕ್ಷ್ಮಣ ಕಾಂಬಳೆ ಇವರ ಹೆಸರಿನಲ್ಲಿ ಇರುತ್ತದೆ. ಆದರೆ ಅರ್ಜಿದಾರರು ತಿಳಿಸಿರುವಂತೆ ಶ್ರೀ ಬಸಪ್ಪಾ ಎಂ ನಂದಿ ಸಾ!! ನಾವಗೆ ಇವರ ಹೆಸರಿನಲ್ಲಿ ಆರ್. ಆರ್ ಸಂಖ್ಯೆ 48494 ಇದ್ದು, ಇದಕ್ಕೆ ರಿ.ಸ.ನಂ 242/2 ರ 1117 ಆಸ್ತಿಗೆ ಸಂಪರ್ಕ ನೀಡಿಲಾಗಿದೆ.

c. STBARIP-64650 ಸದರಿ ಸ್ಥಾವರಕ್ಕೆ ಸಂಪರ್ಕ ನೀಡುವ ಸಮಯದಲ್ಲಿ ನೀಡಿದ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸದರಿ ಸಂಖ್ಯೆಯ ಅಡಿಯಲ್ಲಿ ರಿಸ ನಂ 89/1 ಮಾಲಿಕತ್ವ ಹೊಂದಿರುವ ಶ್ರೀ ಮಾರುತಿ ದುರಗಪ್ಪ ದರವಶಿ ಸಾ ಸಂತಿಬಸ್ತವಾಡ ಇವರ ಹೆಸರಿನಲ್ಲಿ ಸಂಪರ್ಕವನ್ನು ಕಲ್ಪಸಲಾಗಿದೆ ಹಾಗೂ ಸದರಿ ಅರ್ಜಿದಾರರು ಸಭೆಯಲ್ಲಿ ತಿಳಿಸಿರುವಂತೆ ಸದರಿ ಸ್ಥಾವರವು ರಿ ಸಂ, 89/2 ಇರುವ ಬಗ್ಗೆ ಯಾವುದೇ ದಾಖಲಾತಿಗಳನ್ನು ಪೂರೈಸಿರುವುದಿಲ್ಲ.

ಮುಂದುವರೆದು ಗ್ರಾಹಕರ ಅನುಕೂಲಕ್ಕಾಗಿ ಹಾಗೂ ಕುಂದು ಕೊರತೆಯ ನಿವಾರಣೆಗಳನ್ನು ಪರಿಹರಿಸಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆ ಇದ್ದು. ಆದರೆ ಇಲ್ಲಿ ಅರ್ಜಿದಾರರು ತಮ್ಮ ಯಾವುದೇ ಸ್ಥಾವರದ ಬಗ್ಗೆ ಕುಂದು ಕೋರತೆಗಳ ಬಗ್ಗೆ ಪರಿಹರಿಸಿಕೊಳ್ಳಲು/ನಿವಾರಣೆಗೆ ಕೇಳದೆ ಬೇರೆಯವರ ಸಂಬಂಧಿಸಿದ ಗ್ರಾಹಕರ ಆರ್ ಆರ್ ಸಂಖ್ಯೆಗಳ ವಿದ್ಯುತ್ ಸಂಪರ್ಕ ನಿಲುಗಡೆ ಮಾಡಲು ವಿನಂತಿಸಿಕೊಳ್ಳುತ್ತಿದ್ದಾರೆ ಹಾಗೂ ಆರ್ ಆರ್ ಸಂಖ್ಯೆಗಳ ಈಗಾಗಲೇ ಅಧಿಕೃತವಾಗಿ ನೀಡಲಾದ ವಿದ್ಯುತ್

ಸಂಪರ್ಕ ಆ ಜಾಗೆಯಲ್ಲಿ ಇರದೇ ಬೇರೆ ಜಾಗೆಯಲ್ಲಿ ಇರುತ್ತದೆ ಎಂದು ಗ್ರಾಹಕರ ವೇದಿಕೆಯಲ್ಲಿ ಅರ್ಜಿ ನೀಡಿದ್ದು ಸದರಿ ವಿಷಯವು ಗ್ರಾಹಕರ ಕುಂದು ಕೊರತೆ ವಿವಾರಣಾ ವೇದಿಕೆಯ ಪರಿವಿಧಿಯಲ್ಲಿ ಬರುವುದಿಲ್ಲವೆಂದು ನನ್ನ ಸ್ವಂತ ಅಭಿಪ್ರಾಯವೆಂದು ತಮ್ಮ ದಯಾಪರ ಗಮನಕ್ಕೆ ತರಬಯಸುತ್ತೇನೆ.

## ವೇದಿಕೆಯ ಅಭಿಪ್ರಾಯ:

ದೂರುದಾರರು ಸಲ್ಲಿಸಿರುವ ದೂರಿನ ಕುರಿತು, ದೂರುದಾರರು ಹಾಗೂ ಪ್ರತಿವಾದಿ ಸಲ್ಲಿಸಿರುವ ಲಿಖಿತ ದಾವೆಯನ್ನು ಹಾಗೂ ಇತರೆ ದಾಖಲೆಗಳನ್ನು ಅವಲೋಕಿಸಲಾಗಿ, ವೇದಿಕೆಯ ಅಭಿಪ್ರಾಯ ಈ ಕೆಳಗಿನಂತೆ ಇರುತ್ತದೆ:

Karnatak Electricity Regulatory Commission (Consumer Grievance Redressal Form and Ombudsman) Regulation 2004, Section 2 (g) **'Complaint'** means "any grievance made by consumer with regard to supply of electricity by the licensee, provided that grievance falling within the purview of any of the following provisions of the Act are excluded from the jurisdication of Form":

unauthorised
a. Unautrised use of electricity as provided under section 126 of the Act.
b. Offences and penalties as provided under section 135 to 139 of the Act.
c. Accident in the distribution, supply or use of electricity as provided under section 161 of the Act, and

ಮತ್ತು ಪ್ರತಿವಾದಿಗಳು ತಮ್ಮ ಲಿಖಿತ ದಾವೆಯಲ್ಲಿ ಮುಂದುವರೆದು ಗ್ರಾಹಕರ ಅನುಕೂಲಕ್ಕಾಗಿ ಹಾಗೂ ಕುಂದು ಕೊರತೆಯ ನಿವಾರಣೆಗಳನ್ನು ಪರಿಹರಿಸಿಕೊಳ್ಳಲು ಜಿಲ್ಲಾ ಮಟ್ಟದಲ್ಲಿ ಗ್ರಾಹಕರ ಕುಂದು ಕೊರತೆ ನಿವಾರಣೆ ವೇದಿಕೆ ಇದ್ದು. ಆದರೆ ಇಲ್ಲಿ ಅರ್ಜಿದಾರರು ತಮ್ಮ ಯಾವುದೇ ಸ್ಥಾವರದ ಬಗ್ಗೆ ಕುಂದು ಕೋರತೆಗಳ ಬಗ್ಗೆ ಪರಿಹರಿಸಿಕೊಳ್ಳಲು/ನಿವಾರಣೆಗೆ ಕೇಳದೆ ಬೇರೆಯವರ ಸಂಬಂಧಿಸಿದ ಗ್ರಾಹಕರ ಆರ್ ಆರ್ ಸಂಖ್ಯೆಗಳ ವಿದ್ಯುತ್ ಸಂಪರ್ಕ ನಿಲುಗಡೆ ಮಾಡಲು ವಿನಂತಿಸಿಕೊಳ್ಳುತ್ತಿದ್ದಾರೆ ಹಾಗೂ ಆರ್ ಆರ್ ಸಂಖ್ಯೆಗಳ ಈಗಾಗಲೆ ಅಧೀಕೃತವಾಗಿ ನೀಡಲಾದ ವಿದ್ಯುತ್ ಸಂಪರ್ಕ ಆ ಜಾಗೆಯಲ್ಲಿ ಇರದೇ ಬೇರೆ ಜಾಗೆಯಲ್ಲಿ ಇರುತ್ತದೆ ಎಂದು ಗ್ರಾಹಕರ ವೇದಿಕೆಯಲ್ಲಿ ಅರ್ಜಿ ನೀಡಿದ್ದು ಸದರಿ ವಿಷಯವು ಗ್ರಾಹಕರ ಕುಂದು ಕೊರತೆ ವಿವಾರಣಾ ವೇದಿಕೆಯ ಪರಿವಿಧಿಯಲ್ಲಿ ಬರುವುದಿಲ್ಲವೆಂದು ದಾವೆ ಸಲ್ಲಿಸಿರುತ್ತಾರೆ. ಪ್ರತಿವಾಧಿಗಳ ಅಭಿಪ್ರಾಯ ಸಮಜಸವಾಗಿರುತ್ತದೆ. ಆದ್ದರಿಂದ, ಈ ಮೇಲಿನ ಅಂಶಗಳನ್ನು ಅಂಶಗನ್ನು ಗಣನೆಗೆ ತೆಗೆದುಕೊಂಡು ದೂರುದಾರರು ಸಲ್ಲಿಸಿರುವ ದೂರು ಈ ವೇದಿಕೆಯ ಪರಿವಿಧಿಯಲ್ಲಿ ಬರುವುದಿಲ್ಲ ಎಂದು ಅಭಿಪ್ರಾಯ ಪಡಲಾಗಿದೆ.

**ಆದೇಶ ಸಂಖ್ಯೆ:ಬೆ/ಗ್ರಾವೆ/ಅಇಂ(ವಿ)/ಉಲೆನಿ/ಹಿಸ-2/2019-20:** C45-211 **ದಿನಾಂಕ:** 13 DEC 2019

ಪಿಠೀಕೆಯಲ್ಲಿ ಅಂಶಗಳನ್ನು ಅವಲೋಕಿಸಲಾಗಿ ಶ್ರೀ ಯು ಎಮ್ ಮೋಹಿತೆ, ಹೊಸ ಶಿವಾಜಿ ಕಾಲೋನಿ, ತಿಳಕವಾಡಿ, ಜಿ:ಬೆಳಗಾವಿ ಇವರ ದೂರ ಈ ವೇದಿಕೆಯ ಪರಿವಿಧಿಯಡಿಯಲ್ಲಿ ಬಾರದಿರುವುದರಿಂದ, ಸದರಿ ದೂರನ್ನು ಪರಿಗಣಿಸಲು ಸಾಧ್ಯವಿಲ್ಲ ಎಂದು ಈ ವೇದಿಕೆ ಅಭಿಪ್ರಾಯಪಟ್ಟು, ಈ ದೂರನ್ನು ಈ ವೇದಿಕೆಯು ವಜಾಗೊಳಿಸಿರುತ್ತದೆ.

(ಶರಿಪುದ್ಧಿನ ಅಹ್ಮದ)
ಉಪಲೆಕ್ಕ ನಿಯಂತ್ರಣಾಧಿಕಾರಿ
ಹಾಗೂ ಗ್ರಾಕುಂಕೊನಿವೇ ಸದಸ್ಯರು
ಕಾ & ಪಾ ವೃತ್ತ, ಬೆಳಗಾವಿ.

(ಸುನೀಲ ಸಾಣಿಕೊಪ್ಪ)
ಆಯೋಗದಿಂದ ನಿಯೋಜಿಸಲಾದ
ಸದಸ್ಯರು.

(ಗಿರಿಧರ ಕುಲಕರ್ಣಿ)
ಅಧೀಕ್ಷಕ ಇಂಜಿನೀಯರ(ವಿ)
ಕಾ & ಪಾ ವೃತ್ತ, ಹೆಸ್ಕಾಂ, ಬೆಳಗಾವಿ
ಹಾಗೂ ಅಧ್ಯಕ್ಷರು, ಬೆಳಗಾವಿ ಜಿಲ್ಲೆ,
ಗ್ರಾ.ಕುಂ.ಕೊ.ನಿ.ವೇದಿಕೆ.

ಗೆ,
ಶ್ರೀ ಯು ಎಮ್ ಮೋಹಿತೆ,
ಹೊಸ ಶಿವಾಜಿ ಕಾಲೋನಿ
ತಿಳಕವಾಡಿ, ಬೆಳಗಾವಿ.

"ನೊಂದಣಿ ಅಂಚೆ ಮುಖಾಂತರ"

ಪ್ರತಿ:

1. ಮುಖ್ಯ ಇಂಜಿನೀಯರ(ವಿ), ಬೆಳಗಾವಿ ವಲಯ, ಹುವಿಸಕಂನಿ., ಬೆಳಗಾವಿ.
2. ಪ್ರಧಾನ ವ್ಯವಸ್ಥಾಪಕರು (ತಾಂತ್ರಿಕ), ನಿಗಮ ಕಛೇರಿ, ಹುವಿಸಕಂನಿ, ಹುಬ್ಬಳ್ಳಿ.
3. ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ವಿಭಾಗ, ಹುವಿಸಕಂನಿ., ಬೆಳಗಾವಿ ಇವರಿಗೆ ಮಾಹಿತಿಗಾಗಿ.
4. ಸಹಾಯಕ ಕಾರ್ಯನಿರ್ವಾಹಕ ಇಂಜಿನೀಯರ(ವಿ), ಕಾ ಮತ್ತು ಪಾ ಗ್ರಾಮೀಣ ಉಪ ವಿಭಾಗ-1, ಹುವಿಸಕಂನಿ., ಬೆಳಗಾವಿ ಇವರಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.
5. ಮಹಾ ಕಡತ